## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

### ನಿಮ್ಮ ನಾಯಕರು ಯಾಗಾರಬೇಕು ? ಮತದಾನದ ಮೂಲಕ ನಿರ್ಧರಿಸಿ

ದಿನೇದಿನೆ ಲೋಕಸಭೆ ಚುನಾವಣೆ ಕಾವು ಏರುತ್ತಿದೆ. ಕರ್ನಾಟಕದಲ್ಲಿ ಏಪ್ರಿಲ್ 26 ಮತ್ತು ಮೇ 7ರಂದು (ಎರಡು ಹಂತದಲ್ಲಿ) ಮತದಾನ ನಡೆಯಲಿದೆ. ಸುರಪುರ ಸೇರಿದಂತೆ 13 ರಾಜ್ಯಗಳ 26 ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಯೂ ಈಗಲೇ ನಡೆಯಲಿದೆ. ಜೂನ್ 4ರಂದು ಇಡೀ ದೇಶದ ಚುನಾವಣೆ ಫಲಿತಾಂಶ ಪ್ರಕಟವಾಗಲಿದೆ. ಈಗಾಗಲೇ ಮಾದರಿ ನೀತಿ ಸಂಹಿತೆ ಜಾರಿಯಾಗಿದೆ. ಈ ಸಲ 97 ಕೋಟಿ ಮತದಾರರು ಹಕ್ಕು ಚಲಾಯಿಸಲಿದ್ದಾರೆ. 18–19 ವರ್ಷದ 1.89 ಕೋಟಿ ಮತದಾರರು ಮೊದಲ ಬಾರಿಗೆ ಮತಹಕ್ಕು ಚಲಾಯಿಸಲಿದ್ದಾರೆ. 85 ವರ್ಷ ದಾಟಿದವರು ಮತ್ತು ಅಂಗವಿಕಲರಿಗೆ ಮನೆಯಿಂದಲೇ ಹಕ್ಕು ಚಲಾಯಿಸಲು ಅವಕಾಶವಿದೆ. ಪ್ರಾದೇಶಿಕ ಮತ್ತು ರಾಷ್ಟ್ರೀಯ ಪಕ್ಷಗಳು ಈಗಾಗಲೇ 543 ಲೋಕಸಭಾ ಕ್ಷೇತ್ರಗಳಿಗೆ ತಮ್ಮ ಅಭ್ಯರ್ಥಿಗಳನ್ನು ಘೋಷಿಸಲು ಪ್ರಾರಂಭಿಸಿದ್ದು, ಬಹುತೇಕ ಅಂತಿಮವಾಗಿದೆ. ಭಾರತವು ದೊಡ್ಡ ಪ್ರಜಾಪ್ರಭುತ್ವ ದೇಶದ ಜನತಂತ್ರ ಹಬ್ಬ. ವರ್ಷದಿಂದ ವರ್ಷಕ್ಕೆ ಚುನಾವಣೆಗಳು ಆಧುನಿಕರಣವಾಗುತ್ತಿದೆ ಮತ್ತು ಪಾರದರ್ಶಕವಾಗುತ್ತ ಹೋಗುತ್ತಿದೆ. ಬ್ಯಾಲೆಟ್ ಪೇಪರ್‌ಗಳ ಜಾಗದಲ್ಲಿ ಇವಿಎಂಗಳು ಬಂದಿವೆ. ವಾರಗಟ್ಟಲೆ ನಡೆಯುತ್ತಿದ್ದ ಮತ ಎಣಿಕೆಯೀಗ ಒಂದೇ ದಿನಕ್ಕಿಳಿದಿದೆ. ಚುನಾವಣೆ ಆಯೋಗ ಈ ಬಾರಿ ವಿಭಿನ್ನ ಉಪಕ್ರಮಗಳನ್ನು ಕೈಗೊಂಡು ಗಮನ ಸೆಳೆದಿದೆ. ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಅಧಿಸೂಚನೆ ಹೊರಡಿಸುವ 10 ದಿನಗಳ ಮೊದಲಿನವರೆಗೂ ಮತದಾರರ ಪಟ್ಟಿಗೆ ಸೇರ್ಪಡೆಗೆ ಅವಕಾಶವಿದೆ. ವಾಹನಗಳು ಹೋಗದ ಕಡೆಯಲ್ಲೂ ಮತ ಕೇಂದ್ರಗಳಾಗುತ್ತಿವೆ. ಕರ್ತವ್ಯನಿರತ ಪತ್ರಕರ್ತರಿಗೂ ಅಂಚೆ ಮತದಾನ ಅವಕಾಶವಿದೆ. ಆದರೂ, ಗ್ರಾಮೀಣ ಪ್ರದೇಶದಲ್ಲಿ ಮತದಾನ ತೃಪ್ತಿಕರವಾಗಿದ್ದರೆ ನಗರ ಪ್ರದೇಶಗಳಲ್ಲಿ ಶೇ.70 ದಾಟುವುದಿಲ್ಲ. ನಗರ ಪ್ರದೇಶಗಳ ನಾಗರಿಕರು ಹಕ್ಕುಚಲಾಯಿಸಲು ಕೊಡಲಾದ ರಜೆಯನ್ನು ಮೋಜಿಗಾಗಿ ಬಳಸುತ್ತಿದ್ದಾರೆ. ಈ ಮೂಲಕ ಆಡಳಿತ ಚುಕ್ಕಾಣಿ ಹಿಡಿಯುವವರು ಯಾರು ಎಂಬುದನ್ನು ಅವರೇ ಕೈಬಿಡುತ್ತಿದ್ದಾರೆ. ಮತದಾನ ಪ್ರಕ್ರಿಯೆಯಲ್ಲಿ ಅಧಿಕಾರಿಗಳದೂ ಪ್ರಮುಖ ಜವಾಬ್ದಾರಿಯಿದೆ. ಮತಯಂತ್ರಗಳು ಕೈಕೊಟ್ಟಾಗ ತಕ್ಷಣವೇ ನಿವಾರಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಮಾಯವಾಗದಂತೆ ಎಚ್ಚರ ವಹಿಸಬೇಕು. ಇದು ಎಚ್ಚರಿಕೆಯಿಂದ ಅಧಿಕಾರಿಗಳು ನಿರ್ವಹಿಸಬೇಕಾದ ಸಂಗತಿ. ಮತದಾರರು ಅಷ್ಟೇ, ತಮ್ಮ ಹಕ್ಕನ್ನು ಕಡ್ಡಾಯವಾಗಿ ಚಲಾಯಿಸಬೇಕು. ಇದು ಕೇವಲ ಒಂದು ಮತ ಮಾತ್ರವಲ್ಲ. ನೀವು ಹಾಕುವ ಒಂದೊಂದು ಮತವೂ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ. ನೀವು ಯಾರನ್ನು ಆಯ್ಕೆ ಮಾಡುತ್ತೀರೋ ಅವರೇ ದೇಶವನ್ನು ಮುನ್ನಡೆಸುತ್ತಾರೆ. ಅನರ್ಹರನ್ನು ಕೈಬಿಟ್ಟು, ಕೆಲಸ ಮಾಡಬಹುದಾದ ವ್ಯಕ್ತಿಗಳಿಗೆ ನಿಮ್ಮ ಬೆಂಬಲ ಸೂಚಿಸಿ. ಇದು ಪ್ರಜಾಪ್ರಭುತ್ವ ಹೊಂದಿರುವ ದೇಶ. ನಿಮ್ಮ ನಾಯಕರನ್ನು ನೀವೇ ಆರಿಸಿಕೊಳ್ಳಲು ಇಲ್ಲಿ ಅವಕಾಶವಿದೆ. ಈ ಕಾರಣಕ್ಕೆ ಯಾರೂ ಮತದಾನದಿಂದ ವಂಚಿತ ಆಗದಿರಿ. ಮತದ ಮೌಲ್ಯವನ್ನು ಅರಿದರೆ ನೀವು ಒಂದೊಳ್ಳೆ ದೇಶದ ಪ್ರಜೆಯಾಗಬಹುದು. ಉತ್ತಮ ಪ್ರಜೆಯಾಗಲು ನೀವು ಉತ್ತಮ ಆಡಳಿತಗಾರರನ್ನು ನೇಮಿಸಬೇಕು. ಇದು ಮತದಾನದಿಂದ ಮಾತ್ರವೇ ಸಾಧ್ಯವಾಗುವ ವಿಷಯ. ಇದನ್ನು ಹಬ್ಬದಂತಯೇ ಸಂಭ್ರಮಿಸಬೇಕು. ಮೊದಲಾದರೆ ರಾಜಮಹಾರಾಜರ ಆಡಳಿತವಿತ್ತು. ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ–ಮಹಾರಾಜರು ಯಾರಾಗಬೇಕು ಎಂಬುದನ್ನು ನೀವೇ ನಿರ್ಧರಿಸಿ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com M: 9448633038

# ವಿಜಯನಗರದ ರಾಣಿ ಗಂಗಾದೇವಿ ರಚಿಸಿದ ಇತಿಹಾಸ-ಕಾವ್ಯ

# ಮಧುರ ವಿಜಯಂ




ವಿಜಯನಗರ ಸಾಮ್ರಾಜ್ಯದ ಅರಸರ ಕಾಲದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಹಿರಿಮೆ ಹಿರಿದಾದದ್ದಾಗಿದೆ. ಕವಿ ಪಂಡಿತರಿಗೆ ವಿಶೇಷ ಮನ್ನಣೆ ಗೌರವಗಳುಸಲ್ಲುತ್ತಿದ್ದವು. ವಿಶೇಷವಾಗಿ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯ ಅರಸರ ಕಾಲದಲ್ಲಿ ಕವಿಗಳಿಗೆ ಪಂಡಿತರಿಗೆ ರಜಾಶ್ರಯವಿತ್ತು. ಹೀಗಾಗಿ ಅನೇಕ ಕವಿಗಳು, ಪಂಡಿತರು ,ನೂರೊಂದು ವಿರಕ್ತರು ಹಂಪಿಯಲ್ಲಿ ನೆಲನಿಂತು ಸಾಹಿತ್ಯವನ್ನು ರಚನೆ ಮಾಡಿದ್ದರು. ಸಂಸ್ಕೃತ, ಕನ್ನಡ ,ತೆಲುಗು ಹೀಗೆ ಹಲವಾರು ಭಾಷೆಗಳ ಕವಿಗಳು ರಾಜಶ್ರಯ ಪಡೆದಿದ್ದರು. ಅಷ್ಟೇ ಅಲ್ಲ ಅರಸನಾಗಿದ್ದ ಕೃಷ್ಣದೇವರಾಯ ಸ್ವತಃ ತೆಲುಗಿನಲ್ಲಿ ಅಮುಕ್ತ ಮೌಲ್ಯದ ಕೃತಿಯನ್ನು ರಚಿಸಿದ್ದು ಬಹುತೇಕರಿಗೆ ಗೊತ್ತಿರುವ ಸಂಗತಿಯೇ ಆಗಿದೆ. ಆದರೆ ವಿಜಯನಗರ ಸಾಮ್ರಾಜ್ಯದ ವೀರ ಕಂಪಣನ ರಾಣಿ ಗಂಗಾದೇವಿಯು ಸಂಸ್ಕೃತದಲ್ಲಿ ಮಧುರ ವಿಜಯಂ ಎಂಬ ಕಾವ್ಯವನ್ನು ಬರೆದವಳು ಎಂಬುದು ಬಹುತೇಕರಿಗೆ ಗೋತ್ತಿಲ್ಲದ ವಿಷಯ. ಅದುವರೆಗೂ ಸಂಸ್ಕೃತದಲ್ಲಿ ಯಾವ ಮಹಿಳೆಯು ಕಾವ್ಯ, ಸಾಹಿತ್ಯವನ್ನು ರಚಿಸಿರಲಿಲ್ಲ.ಆದರೆ ಗಂಗಾದೇವಿ ಸಂಸ್ಕೃತದಲ್ಲಿ ಮೊಟ್ಟಮೊದಲಿಗೆ ಕಾವ್ಯವನ್ನು ರಚಿಸಿ ಹೊಸ ಚರಿತ್ರೆಯನ್ನು ಸೃಷ್ಟಿಸಿದ್ದವಳು. ರಾಣಿ ರಚಿಸಿದ ಮಧುರ ವಿಜಯಂ ಅಥವಾ ವೀರ ಕಂಪಣರಾಯ ಚರಿತಂ ಕುರಿತು ಒಂದಷ್ಟು ಮಾಹಿತಿ ಓದುಗರಿಗಾಗಿ.

ವಿಜಯನಗರದ ರಾಣಿಯಾದ ಗಂಗಾದೇವಿ ವಿರಚಿತ ಮಧುರ ವಿಜಯಂ ಅಥವಾ ವೀರ ಕಂಪರಾಯ ಚರಿತಂ ಎಂಬ ಕಾವ್ಯವು ಹಲವಾರು ಕಾರಣಗಳಿಂದಾಗಿ ಮಹತ್ವವನ್ನು ಪಡೆಯುತ್ತದೆ. ಬುಕ್ಕರಾಯನ ಮಗ ಕಂಪ ಅಥವಾ ಕಂಪನ, ಮದುರೆಯ ಸುಲ್ತಾನನನ್ನು ಯುದ್ಧದಲ್ಲಿ ಸೋಲಿಸಿದ ಘಟನೆಯನ್ನು ಪ್ರಮುಖವಾದ ವಸ್ತುವನ್ನಾಗಿಸಿಕೊಂಡು ಆತನ ಮಡದಿಯಾದ ಗಂಗಾದೇವಿಯು ಈ ಮಧುರ ವಿಜಯಂ ಕಾವ್ಯವನ್ನು ರಚನೆ ಮಾಡಿದ್ದಾಳೆ. ವಿಜಯನಗರದ ಕನ್ನಡತಿ ಗಂಗಾದೇವಿ ರಾಣಿಯು ಕನ್ನಡ ನಾಡಿನ ಇತಿಹಾಸ ಕುರಿತು ಸಂಸ್ಕೃತದಲ್ಲಿ ರಚನೆ ಮಾಡಿರುವುದು ವಿಶೇಷವಾಗಿ ಗಮನವನ್ನು ಸೆಳೆಯುತ್ತದೆ.

ವಿಜಯನಗರದ ಬುಕ್ಕರಾಯ ಮಗನಾದ ಕಂಪನ ತನ್ನ ತಂದೆಯ ಆಸೆಯಂತೆ ದಕ್ಷಿಣಕ್ಕೆ ದಂಡೆತ್ತಿ ಹೋಗಿ ತುಂಬಿರ ಮಂಡಲದ ಚಂಪನನ್ನು ನಾಶ ಮಾಡಿ ಸುಮಾರು 10 ವರ್ಷಗಳ ಕಾಲ ಆ ನಗರದಲ್ಲಿ ಆಡಳಿತ ನಡೆಸಿ ಆನಂತರ ತನ್ನ ಸೈನ್ಯ ಸಮೇತನಾಗಿ ಮದುರೆಯನ್ನು ಮುತ್ತಿ ಅಲ್ಲಿಯ ಆಡಳಿತ ನಡೆಸುತ್ತಿದ್ದ ಸುಲ್ತಾನನನ್ನು ಸದೆಬಡೆದು ರಾಜನಾಗುತ್ತಾನೆ.ದಕ್ಷಿಣ ಭಾರತದಲ್ಲಿ ಮುಸ್ಲಿಮರ ಆಳ್ವಿಕೆ ಕೊನೆಗೊಂಡು ವಿಜಯನಗರದ ಹಿಂದೂ ಧರ್ಮ ಪುನರುತ್ಥಾನಗೊಂಡಿತು. ಇದು ಈ ಕಾವ್ಯದ ವಸ್ತು. ಕನ್ನಡದ ಮೇಲೆ ಅಭಿಮಾನವನ್ನು ಪ್ರದರ್ಶಿಸಿರುವ ಗಂಗಾದೇವಿ ತನ್ನ ಕಾವ್ಯವನ್ನು ಮಾತ್ರ ಸಂಸ್ಕೃತದಲ್ಲಿ ರಚನೆ ಮಾಡಿದ್ದಾಳೆ. ಪ್ರಾಯಶ ಕನ್ನಡ ವೀರನ ಶೌರ್ಯ ಧೈರ್ಯ ಸಾಹಸಗಳನ್ನು ಕನ್ನಡೇತರ ವಿದ್ವತ್ ಲೋಕವನ್ನು ಸೆಳೆಯುವಂತೆ ಮಾಡಲು ಸಂಸ್ಕೃತ ಭಾಷೆ ಆಗಿನ ಕಾಲಕ್ಕೆ ಯೋಗ್ಯವೆಂದು ಭಾವಿಸಿ ಅವಳು ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಕಾವ್ಯವನ್ನು ರಚಿಸಿರಬಹುದು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಆ ಕಾಲಘಟ್ಟದಲ್ಲಿ ಸ್ತ್ರೀಯರು ಶೂದ್ರರು ಸಂಸ್ಕೃತ ಕಲಿಯಲು ಅವಕಾಶಗಳಿರಲಿ, ಆದರೆ ಮಹಿಳೆಯಾದ ಇವಳು ಸಂಸ್ಕೃತವನ್ನು ಕಲಿತು ಕಾವ್ಯ ರಚನೆ ಮಾಡಿದ್ದು ಅತ್ಯಂತ ಚಾರಿತ್ರಿಕವಾದದ್ದಾಗಿದೆ. ಒಬ್ಬ ಮಹಿಳೆ ಸಂಸ್ಕೃತದಲ್ಲಿ ಕಾವ್ಯ ರಚನಾ ಮಾಡಿದ್ದು ಅವಳ ಧೈರ್ಯ ಮತ್ತು ಸಾಹಸವನ್ನು ತೋರಿಸುತ್ತದೆ ಎನ್ನುತ್ತಾರೆ ವಿದ್ವಾಂಸರು.

ಮಧುರ ವಿಜಯ ಅಥವಾ ವೀರಕಂಪಣರಾಯ ಗ್ರಂಥದಲ್ಲಿ ಒಂಬತ್ತು ಸರ್ಗಗಳನ್ನು ಹೊಂದಿದೆ .ಈ ಒಂಬತ್ತು ಸರ್ಗ ಅಥವಾ ಅಧ್ಯಾಯಗಳಲ್ಲಿ ಮೊದಲ ನೆಯ ಅಧ್ಯಾಯದಲ್ಲಿ ಗಣಪತಿ ಮತ್ತು ಪಾರ್ವತಿ ಪರಮೇಶ್ವರರನ್ನು, ಸರಸ್ವತಿ ಯನ್ನು ಕುರಿತು ಶ್ರುತಿಸುತ್ತಾಳೆ. ಎರಡನೇ ಅಧ್ಯಾಯದಲ್ಲಿ ಅರಸನಿಗೆ ಪುತ್ರನ ಜನನ ಹಾಗೂ ಅದರ ಸಂತೋಷ ಕುರಿತು ರಚನೆ ಮಾಡಿದ್ದಾಳೆ. ಮೂರನೇ ಅಧ್ಯಾಯದಲ್ಲಿ ಕಂಪಣನ ವಿದ್ಯಾಭ್ಯಾಸ ಅವನಿಗೆ ಅಸ್ತ್ರವಿದ್ಯೆಯನ್ನು ಕಲಿಸಿಕೊಟ್ಟಿದ್ದು, ಬುಕ್ಕ ಕಂಪಣ್ಣನಿಗೆ ಉಪದೇಶ ನೀಡುತ್ತಾನೆ. ತೊಂಡಿರ ಮಂಡಲದ ಚಂಪನನ್ನು ನಿರ್ಮೂಲನೆ ಮಾಡಿ ಮತ್ತೆ ಮದುರೆಯ ಸುಲ್ತಾನನನ್ನು ನಿರ್ನಾಮ ಮಾಡಬೇಕೆಂದು ಸೂಚಿಸುತ್ತಾನೆ.ಮತ್ತೆ ಕಂಪನ ವಿಜಯೋತ್ಸವದಿಂದ ಅಂತಪುರಕ್ಕೆ ನಡೆದ ಎಂಬಲ್ಲಿಗೆ ಮೂರನೆಯ ಅಧ್ಯಾಯ ಮುಗಿಯುತ್ತದೆ. ನಾಲ್ಕನೆಯ ಅಧ್ಯಾಯದಲ್ಲಿ ಯುದ್ಧಕ್ಕೆ



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ:** 9449654489
Scan For Digital Colourful
HAMPI TIMES E-paper

## ಹಂಪಿ ಒಳನೋಟ

ಹೊರಟ ಸೇನೆ ಆನೆ ಕುದುರೆ ಕಲಾಳು ಪಡೆ ಮೊದಲಾದ ಸೈನ್ಯಸಾಗರದ ಚಲನವಲನಗಳನ್ನು ಗಂಗಾದೇವಿ ವರ್ಣಿಸುತ್ತಾಳೆ ಐದನೆಯ ಅಧ್ಯಾಯದಲ್ಲಿ ಕಾಂಚಿಪುರದಿಂದ ಕಂಪಣ್ಣ ವೈಭವದೊಡನೆ ಆಡಳಿತ ನಡೆಸಿ ಪ್ರಜಾಗಳ ಪ್ರೀತಿಯನ್ನು ಸಂಪಾದಿಸುತ್ತಾನೆ. ಇವನ ಓಲಗದಲ್ಲಿ ಕಾವ್ಯವಾಚನ ಸಂಗೀತ ನರ್ತನ ಮೊದಲಾದವುಗಳು ಅವನ ಅಂತಪುರದ ನಾರಿಯರಿಂದ ನಡೆಯುತ್ತಿದ್ದವು ಎನ್ನುವುದನ್ನು ಗಂಗಾದೇವಿ ವರ್ಣಿಸಿದ್ದಾಳೆ .ಆರನೇ ಅಧ್ಯಾಯವು ವರ್ಣನಾ ವರ್ಗವಾಗಿ ರಾಣಿವಾಸದವರ ವರ್ಣನೆ ಇದೆ. ಏಳನೇ ಅಧ್ಯಾಯದಲ್ಲಿ ಸುಂದರ ಸಂಜೆಯ ವರ್ಣನೆ ಇದೆ.ಎಂಟನೆಯ ಅಧ್ಯಾಯದಲ್ಲಿ ಶ್ರೀರಂಗ ಹಾಗೂ ಇತರೆ ದೇವಾಲಯಗಳು ದುಸ್ಥಿತಿ, ಮುಸ್ಲಿಂರ ಹಾವಳಿ ಆ ಕಾಲದ ಸ್ಥಿತಿಗತಿಗಳನ್ನು ಪರಿಸ್ಥಿತಿಗಳನ್ನು ಕುರಿತು ವಿವರಣಾತ್ಮಕವಾದ ವರ್ಣನೆಯಿಂದ ಕೂಡಿದೆ 9ನೇ ಹಾಗೂ ಕೊನೆಯ ಅಧ್ಯಾಯದಲ್ಲಿ ಈ ಅಧ್ಯಾಯದ ಪುಟಗಳು ಮೂಲ ಪ್ರತಿಯಲ್ಲಿ ಹಾಳಾಗಿರುವುದರಿಂದ ಅಳಿದುಳಿದ ಪುಟಗಳಿಂದಲೇ ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಮಧುರ ವಿಜಯ ಕಾವ್ಯದ ಹೆಸರು ಸಾರ್ಥಕವಾಗುವ ಹಾಗೆ ಕೊನೆಯ ಅಧ್ಯಾಯದಲ್ಲಿ ವರ್ಣಿಸಲಾಗಿದೆ ಮುಸ್ಲಿಮರ ಸೈನ್ಯ ನಾಶವಾಗಿ ನಾಡೆಲ್ಲವು ಮುಸ್ಲಿಮರ ಭಾದೆಯಿಂದ ಮುಕ್ತವಾಗಿ ಶೋಭಿಸಿತು ಕಂಪಣ ರಾಜ ಮುಕುಟವನ್ನು ಧರಿಸಿ ರಾಜ್ಯಭಾರವನ್ನು ಮಾಡಿದ ಎಂಬ ವರ್ಣನೆಯು ಈ ಅಧ್ಯಾಯದೊಂದಿಗೆ ಮಧುರ ವಿಜಯ ಕಾವ್ಯ ಸಮಾಪ್ತಿಯಾಗುತ್ತದೆ.ಗಂಗಾದೇವಿ ವಿರಚಿತ ಮಧುರ ವಿಜಯವೆಂಬ ವೀರಕಂಪರಾಯ ಚರಿತಂ ಎಂದು ಪ್ರತಿ ಅಧ್ಯಾಯದ ಕೊನೆಗೆ ಕೊನೆಗೊಳ್ಳುತ್ತದೆ.

ಒಟ್ಟಾರೆ ಈ ಕಾವ್ಯದಲ್ಲಿ ಬುಕ್ಕರಾಯನ ಮಗ ಕಂಪಾ ಅಥವಾ ಕಂಪನ ಮದುರೆ ಯುದ್ಧದಲ್ಲಿ ಸುಲ್ತಾನನನ್ನು ಸೋಲಿಸಿದ ಘಟನೆಯನ್ನು ,ಸಾಹಸದ ಕಾರ್ಯವನ್ನು ವರ್ಣನೆ ಮಾಡಿದ್ದಾಳೆ. ಮಧುರ ವಿಜಯಂ ಇದು ಕೇವಲ ಇತಿಹಾಸವನ್ನು ದಾಖಲಿಸುವ ಉದ್ದೇಶದಿಂದ ರಚಿತವಾದ ಗ್ರಂಥವೆಂದು ಹೇಳುವಂತಿಲ್ಲ ಇದು ಇತಿಹಾಸ ಕಾವ್ಯವಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.ಕಾವ್ಯಕ್ಕೆ ಸಹಜವಾದ ಕೆಲವು ಅಂಶಗಳನ್ನು ಬಿಟ್ಟರೆ ಚಾರಿತ್ರಿಕ ವಾಸ್ತವಿಕ ಹಿನ್ನೆಲೆ ಸ್ಥೂಲವಾಗಿರುವುದು ಗೋಚರಿಸುತ್ತದೆ.ನಡೆದ ಘಟನೆಗಳ ಪ್ರತ್ಯಕ್ಷ ಅನುಭವ ಉಳ್ಳ ರಾಜಕೀಯ ಘಟನೆಗಳಿಗೆ ನೇರವಾಗಿ ಸಂಬಂಧಿಸಿದ ನಾಯಕನ ನಿಕಟಾನವರ್ತಿಯಾದ ಮುಖ್ಯರಾಣಿಯೇ ನಿರೂಪಕಗಳಾಗಿರುವುದರಿಂದ ಹೆಚ್ಚು ವಿಶ್ವಾಸನೀಯವಾದ ಸಂಗತಿಗಳು ಇದರಿಂದ ತಿಳಿದು ಬರುತ್ತದೆ ಎಂದು ವಿದ್ವಾಂಸರು ಅಭಿಪ್ರಾಯ.ಕಂಪನನ ನೆಚ್ಚಿನ ಮಡದಿ ಗಂಗಾದೇವಿಯು ವೀರನಾದ ತನ್ನ ಗಂಡನ ಮಧುರಭಿಯೋಗವನ್ನು ಕುರಿತು ಕಾವ್ಯವಾಗಿ ಬರೆದಿದ್ದಾಳೆ. ಕಂಪನನ್ನು ಕನ್ನಡದ ಕುಲ ಪ್ರದೀಪ್ ಎಂದು ಕರೆಯುತ್ತಾಳೆ.ಕರ್ನಾಟಕ ಸೇನೆಯ ಬಗ್ಗೆ ಹೆಮ್ಮೆಯನ್ನು ವ್ಯಕ್ತಮಾಡುತ್ತಾಳೆ.

ಮಧುರ ವಿಜಯಂ ಅಥವಾ ವೀರಕಂಪ ರಾಯ ಚರಿತಂ ಎಂಬ ಈ ಕೃತಿಯನ್ನು ಕುರಿತು ಖ್ಯಾತ ಸಂಶೋಧಕರಾಗಿದ್ದ, ಡಾ.ಎಂ.ಚಿದಾನಂದ ಮೂರ್ತಿ ಅವರು ಹೀಗೆ ಬರೆದಿದ್ದಾರೆ. "ವೀರ ಕಂಪಣ ರಾಯನ ದಕ್ಷಿಣದ ಮಧುರೆ ಸುಲ್ತಾನನ ವಿರುದ್ಧ ಹೋರಾಡಿದ್ದು ಆ ಸಂದರ್ಭದಲ್ಲಿ ಮುಸ್ಲಿಮರಿಂದ ಹಿಂದೂ ಧರ್ಮದ ಮೇಲೆ ನಡೆದ ಘೋರ ಆಕ್ರಮಣದ ಒಂದು ಚಿತ್ರ ಇದರಲ್ಲಿದೆ. ದೇವಾಲಯಗಳಲ್ಲಿ ಕೇಳಿ ಬರುತ್ತಿದ್ದ ವೇದ ಘೋಷ ನಿಂತು ಅಲ್ಲಿ ನರಿಗಳು ಹೇಳಿಕೊಡುತ್ತಿದ್ದ ಚಿತ್ರವಾಗಲಿ ತುರ್ಕರು ಸಿಂಹಾಸನದೊಡನೆ ಗೋ ಹತ್ಯೆ ಮಾಡಿದ್ದು ಪವಿತ್ರ ತಾಮ್ರಪರಣೆ ನದಿ, ಮಾನವ ರಕ್ತದಿಂದ ಹರಿಯುತ್ತಿರುವುದು ಇತ್ಯಾದಿ ವರ್ಣನೆಗಳ ಹಿಂದೆ ಆಗ ನಡೆದ ವಾಸ್ತವದ ಒಂದು ಸ್ಪಷ್ಟ ಸೂಚನೆಯನ್ನು ಈ ಕಾವ್ಯ ಸೂಚಿಸುತ್ತಿದೆ "ಎಂದಿದ್ದಾರೆ.

ಧರ್ಮರಕ್ಷಣೆಗಾಗಿ ಸ್ಥಾಪಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಉದ್ದೇಶ ಮತ್ತು ಕೀರ್ತಿಯನ್ನು ಪ್ರಾರಂಭದಲ್ಲೇ ದಕ್ಷಿಣ ಭಾರತದಲ್ಲಿ ಕಂಪಣ ತನ್ನ ದಿಗ್ವಿಜಯದಿಂದಾಗಿ ವಿಜಯನಗರ ಸಾಮ್ರಾಜ್ಯವನ್ನು ಕಂಗೊಳಿಸುವಂತೆ ಮಾಡಿದ ಸಾಹಸವನ್ನು ರಾಣಿ ಗಂಗಾದೇವಿಯು ಮಧುರ ವಿಜಯಂ ಕಾವ್ಯದಲ್ಲಿ ಕಂಗೊಳಿಸಿದ್ದಾಳೆ. ಆದರೆ ಸಂಸ್ಕೃತದಲ್ಲಿ ಕಾವ್ಯವನ್ನು ಬರೆದ ಈ ಗಂಗಾದೇವಿಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎನ್ನುತ್ತಾರೆ ವಿದ್ವಾಂಸರು. ಇವಳು ಬುಕ್ಕರಾಯನ ಮಗ ಕಂಪಣ್ಣನ ಹೆಂಡತಿ, ಬುಕ್ಕರಾಯನ ಸೊಸೆ ಎಂದು ಮಾತ್ರ ಇದುವರಿಗೆ ಲಭ್ಯವಾಗಿರುವ ಮಾಹಿತಿ ಎನ್ನುತ್ತಾರೆ.

**ಗಂಗಾದೇವಿ ರಚಿಸಿದ ಮಧುರ ವಿಜಯಂ ಕಾವ್ಯದ ಆರನೇ ಸರ್ಗದ ಕಾವ್ಯದ ಒಂದೆರಡು ಪ್ಯಾರಾಗಳು ಓದುಗರಿಗಾಗಿ.**

**ದೇವೇಂದ್ರನಪ್ಸರೆಯರೊಡಗೂಡಿ ನಡೆಯುವಂತೆ**
**ನಂದನವ ಹೋಲುವುತಿಹ ಪ್ರಮದವನಕೆ**
**ಕಂಪಣ ನರೇಂದ್ರ ತನ್ನೊಲವಿನರಸಿಯರೊಡನೆ**
**ಹೊರಟು ನಡೆದನು ಪುಷ್ಪದಪಚಯಕ್ಕೆ**

**ಅಡ್ವಾಣಿ ಕ್ಷಣಿತದೊಡಗೂಡಿ ರಾಜನ ಬೆನ್ನಿಗೆ**
**ರಾಣಿಯರು ಹರಿದಾಡುವ ಸಂಭ್ರಮ**
**ತಂಗಾಳಿ ಬೀಸಿ ಬರದೆ ತುಂಬಿಕೊಂಡಳು ಸಂದೋಹ**
**ಗುಂಯ್ಗುಡುತ ತಿರವವ್ರೋಲಾಯ್ತು ಚೆಂದ**

**ಯುವತಿಯರು ನಡೆದಾಡಿದಾ ದಾರಿಗಳಲೆಲ್ಲ**
**ಅಲ್ಲಿಯ ಪಾದಲೇಪವನವಿಳಿದುದು**
**ತಳಿರುಗಳ ಸಾಲ್ಲೊಂಡು ಪಥವ ಮುಚ್ಚಿದರೇನು?**
**ಎಂಬ ಭಾವವು ನೌಡೆ ಬರಿಸುತಿತ್ತು.**

# ನರೇಗಾ ಕೂಲಿಕಾರರಿಗೆ ಮತದಾನ ಜಾಗೃತಿ ಜಾಥಾ

■ **ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ ಮತದಾನ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಕುಷ್ಟಗಿ ತಾಲೂಕಿನ ಹನುಮಸಾಗರ ಗ್ರಾಮ ಪಂಚಾಯತಿ ವ್ಯಾಪ್ತಿಯ ಹನುಮಸಾಗರದಲ್ಲಿ ಕೂಲಿಕಾರರಿಗೆ ಶನಿವಾರದಂದು ಸ್ವೀಪ್ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮ ಕುರಿತು ಮಾತನಾಡಿದ ತಾಲೂಕ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಿಂಗಪ್ಪ ಎಸ್ ಮಸಳಿ ಅವರು, ಮೇ 7 ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವುದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಮತದಾನ ದಿನದಂದು ನಾವು ಸಮಯ ವ್ಯರ್ಥ ಮಾಡದೆ ಚುನಾವಣೆ ಆಯೋಗ ನಿಗದಿಪಡಿಸಿದ ದಾಖಲೆಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಕೂಲಿ ಕಾರ್ಮಿಕರು ಮತದಾನ ಮಾಡಿ ಇತರರಿಗೂ ಮಾದರಿಯಾಗಬೇಕೆಂದು ಕರೆ ನೀಡಿದರು.

ಪ್ರಸ್ತುತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ವಲಸೆ ಯಾಕ್ರೀ ನಿಮ್ಮೂರಲ್ಲೇ ಉದ್ಯೋಗ ಖಾತರಿ ಅಭಿಯಾನ ಕಾರ್ಯಕ್ರಮ ಆರಂಭವಾಗಿದ್ದು ಸತತ ಎರಡು ತಿಂಗಳ ಕಾಲ ನಿಮ್ಮೂರಲ್ಲೇ ಕೆಲಸ ನಿರ್ವಹಿಸಿ ಎಂದು ತಿಳಿಸಿದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ದೇವೇಂದ್ರಪ್ಪ ಕಮತರ್ ರವರು ಮತದಾರರ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಸ್ವೀಪ್ ಕಾರ್ಯಕ್ರಮದಲ್ಲಿ ತಾಲೂಕು ಐಇಸಿ ಸಂಯೋಜಕರಾದ ಚಂದ್ರಶೇಖರ್ ಜಿ. ಹಿರೇಮಠ್, ಗ್ರಾಮ ಪಂಚಾಯತಿ ಸಿಬ್ಬಂದಿಗಳಾದ ಬಸವರಾಜ್, ಮಹಾಂತಯ್ಯ, ಮಾರುತಿ, ಮಲ್ಲೇಶ್, ಲಲಿತಾ, 80 ಕ್ಕಿಂತ ಹೆಚ್ಚು ಕಾಯಕ ಬಂಧುಗಳು ಹಾಗೂ 1000 ಕ್ಕಿಂತ ಹೆಚ್ಚು ಕೂಲಿಕಾರ್ಮಿಕರು ಹಾಜರಿದ್ದರು.